ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BENGALURU CITY UNIVERSITY
ಸೆಂಟ್ರಲ್ ಕಾಲೇಜು ಆವರಣ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001.
Ph.No.080-22961016 / 22131385 E-Mail ID: registrarbcu@gmail.com

ಸಂಖ್ಯೆ: ಬೆಂ.ನ.ವಿ/ಕುಸಅ/371/2020–21

ದಿನಾಂಕ: 30.01.2021

ರವರಿಗೆ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಉನ್ನತ ಶಿಕ್ಷಣ ಇಲಾಖೆ,
ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ,
ಬೆಂಗಳೂರು – 560 001.

ಮಾನ್ಯರೆ,

ವಿಷಯ:– ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ರ ಪ್ರಕರಣ 41(5) ರಡಿ ಕರಡು ಪರಿನಿಯಮಗಳನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ:–
1. ಸರ್ಕಾರಿ ಆದೇಶ ಸಂಖ್ಯೆ: ಇಡಿ 439 ಯುಬಿವಿ 2017 (ಭಾಗ–4) ದಿನಾಂಕ: 07.11.2019.
2. ದಿನಾಂಕ: 19.08.2020 ರಂದು ಜರುಗಿದ ಹಣಕಾಸು ಸಮಿತಿ ಸಭೆಯ ನಿರ್ಣಯ.
3. ದಿನಾಂಕ: 24.08.2020 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ.
4. ದಿನಾಂಕ: 30.09.2020 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಿರ್ಣಯ.
5. ದಿನಾಂಕ: 30.11.2020 ರಂದು ಜರುಗಿದ 9ನೇಯ ಸಿಂಡಿಕೇಟ್ ಸಭೆಯ ನಿರ್ಣಯ.
6. ದಿನಾಂಕ: 21.01.2021 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ.

ಉಲ್ಲೇಖ (1) ರ ಸರ್ಕಾರಿ ಆದೇಶಗಳಲ್ಲಿ ಬೆಂಗಳೂರು ಕೇಂದ್ರ (ನಗರ) ವಿಶ್ವವಿದ್ಯಾನಿಲಯಕ್ಕೆ ಹೊಸದಾಗಿ ಸ್ನಾತಕೋತ್ತರ ಅಧ್ಯಯನ ವಿಭಾಗಗಳನ್ನು ಆರಂಭಿಸುವ ಹಾಗೂ ಅಸ್ತಿತ್ವದಲ್ಲಿರುವ ವಿಭಾಗಗಳಿಗೆ ಬೋಧಕ/ಬೋಧಕೇತರ ಹುದ್ದೆಗಳನ್ನು ಸೃಜಿಸಲಾಗಿದೆ. ಮೇಲಿನ ಆದೇಶಗಳಲ್ಲಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳ ಅನುಸಾರ ವಿಶ್ವವಿದ್ಯಾನಿಲಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000 ರ ಪ್ರಕರಣ 41 ರ ಉಪಬಂಧಗಳನುಸಾರ ಪರಿನಿಯಮಗಳನ್ನು ರಚಿಸಿಕೊಳ್ಳಬೇಕಾಗಿದೆ.

ತದನುಸಾರ, ವಿಶ್ವವಿದ್ಯಾನಿಲಯದ ಸಿಂಡಿಕೇಟ್ ದಿನಾಂಕ: 05.06.2020 ರಂದು ಹೊಸ ವಿಶ್ವವಿದ್ಯಾನಿಲಯಕ್ಕೆ ಅಗತ್ಯವಾದ ಪರಿನಿಯಮಗಳನ್ನು ರಚಿಸಲು ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಪ್ರೊ: ಬಿ. ತಿಮ್ಮೇಗೌಡ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿತು.

.....2

ಸದರಿ ಸಮಿತಿಯು ಪ್ರಥಮ ಹಂತದಲ್ಲಿ 11 ಕರಡು ಪರಿನಿಯಮಗಳನ್ನು ಸಿದ್ಧಪಡಿಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 41(2) ಮತ್ತು (3) ರನುಸಾರ ಸದರಿ ಕರಡು ಪರಿನಿಯಮಗಳನ್ನು ದಿನಾಂಕ: 19.08.2020 ರಂದು ಜರುಗಿದ ಹಣಕಾಸು ಸಮಿತಿ ಸಭೆ ಹಾಗೂ ದಿನಾಂಕ: 27.09.2020 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತು ಸಭೆಗಳಲ್ಲಿ ಪರಿಗಣಿಸಿ ಅವುಗಳ ಅಭಿಪ್ರಾಯ/ಸಲಹೆಗಳನ್ನು ನೀಡಿ ಅನುಮೋದಿಸಿವೆ. ಈ ಎರಡೂ ಪ್ರಾಧಿಕಾರಗಳ ಅಭಿಪ್ರಾಯಗಳನ್ನು/ಸಲಹೆಗಳನ್ನು ದಿನಾಂಕ: 30.09.2020 ರಂದು ಜರುಗಿದ ಸಿಂಡಿಕೇಟ್ ಸಭೆಯು ಪರಿಗಣಿಸಿ ಪ್ರಕರಣ 41(4) ರಡಿ ಕೆಲವು ತಿದ್ದುಪಡಿಗಳೊಂದಿಗೆ ಈ ಕೆಳಕಂಡ ಕರಡು ಪರಿನಿಯಮಗಳನ್ನು ಅನುಮೋದಿಸಿದೆ.

1. STATUTES RELATING TO APPOINTMENT AND PROMOTION OF TEACHERS AND OTHER ACADEMIC STAFF AND FOR IMPLEMENTATION OF REVISED UGC PAY SCALES IN BENGALURU CITY UNIVERSITY- 2020.
2. STATUTES RELATING TO THE MANNER OF CONDUCTING INTERVIEW FOR APPOINTMENT AND PROMOTION OF TEACHERS AND OTHER ACADEMIC STAFF IN THE BENGALURU CITY UNIVERSITY, BENGALURU, 2020.
3. STATUTES GOVERNING ESTABLISHMENT OF NEW POST-GRADUATE DEPARTMENTS OF STUDIES AND INSTITUTION OF TEACHING POSTS FOR THE NEW AND EXISTING POST-GRADUATE DEPARTMENTS OF STUDIES, IN BENGALURU CITY UNIVERSITY, 2020.
4. STATUTES GOVERNING CADRE, RECRUITMENT AND PROMOTION OF NON TEACHING, TECHNICAL AND MINISTERIAL STAFF IN THE BENGALURU CITY UNIVERSITY, 2020.
5. STATUTE GOVERNING THE AFFILIATION OF COLLEGES/ INSTITUTIONS UNDER THE JURISDICTION OF BENGALURU CITY UNIVERSITY, 2020.
6. STATUTE GOVERNING SENIORITY OF TEACHERS OF BENGALURU CITY UNIVERSITY, 2020.
7. STATUTES GOVERNING CONSTITUTION, MEETINGS, POWERS AND FUNCTIONS OF VARIOUS AUTHORITIES OF THE BENGALURU CITY UNIVERSITY, 2020.
8. STATUTE GOVERNING HOLDING OF CONVOCATIONS FOR CONFERRING DEGREES OF THE BENGALURU CITY UNIVERSITY, 2020.

9. STATUTE GOVERNING AWARD OF HONORARY DEGREES OR ACADEMIC DISTINCTIONS BY BENGALURU CITY UNIVERSITY AT THE ANNUAL CONVOCATIONS, 2020.

10. STATUTES GOVERNING THE INSTITUTION OF ENDOWMENTS FOR AWARD OF GOLD MEDALS, PRIZES, FELLOWSHIPS, SCHOLARSHIPS ENDOWMENT LECTURES AND ACADEMIC CHAIRS, 2020.

11. STATUTES GOVERNING APPOINTMENT, POWERS, FUNCTIONS AND RESPONSIBILTIES OF THE OFFICERS OF THE BENGALURU CITY UNIVERSITY, 2020

ಮುಂದುವರೆದು, ದಿನಾಂಕ: 30.11.2020 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಕ್ರಮ ಸಂಖ್ಯೆ (4) ರಲ್ಲಿರುವ "STATUTES GOVERNING CADRE, RECRUITMENT AND PROMOTION OF NON TEACHING, TECHNICAL AND MINISTERIAL STAFF IN THE BENGALURU CITY UNIVERSITY, 2020" ಪರಿನಿಯಮಗಳನ್ನು ಪುನರ್ ಪರಿಗಣಿಸಿ ದಿನಾಂಕ: 19.08.2020 ರಂದು ಜರುಗಿದ ಹಣಕಾಸು ಸಮಿತಿಯಲ್ಲಿ ಸೂಚಿಸಿದ್ದ ತಿದ್ದುಪಡಿ/ಸಲಹೆಗಳನ್ನು ಅಳವಡಿಸಿಕೊಂಡು ಪರಿನಿಯಮಗಳನ್ನು ಅನುಮೋದಿಸಿದೆ.

ದಿನಾಂಕ: 19.08.2020 ರ ಹಣಕಾಸು ಸಮಿತಿಯ, ದಿನಾಂಕ: 24.08.2020 ರಂದು ವಿದ್ಯಾವಿಷಯಕ ಪರಿಷತ್ತಿನ ಮತ್ತು ದಿನಾಂಕ: 30.09.2020 ಹಾಗೂ 30.11.2020 ರ ಸಿಂಡಿಕೇಟ್ ಪ್ರಾಧಿಕಾರದ ನಿರ್ಣಯಗಳ ಪ್ರತಿಗಳನ್ನು ಲಗತ್ತಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000 ರ ಪ್ರಕರಣ 41(5) ರನುಸಾರ ಮೇಲಿನ 11 ಕರಡು ಪರಿನಿಯಮಗಳನ್ನು ಮಾನ್ಯ ಕುಲಾಧಿಪತಿಗಳ ಅನುಮೋದನೆ ಪಡೆಯಲು **ತ್ರಿಪ್ರತಿಯಲ್ಲಿ** ಸರ್ಕಾರಕ್ಕೆ ಈ ಮೂಲಕ ಸಲ್ಲಿಸಲಾಗಿದೆ.

ದಯಮಾಡಿ ಮೇಲಿನ ಕರಡು ಪರಿನಿಯಮಗಳಿಗೆ ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆ ಪಡೆದು ವಿಶ್ವವಿದ್ಯಾನಿಲಯಕ್ಕೆ ತಿಳಿಸಬೇಕೆಂದು ಕೋರಲು ನಿರ್ದೇಶಿತನಾಗಿದ್ದೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕಗಳು:

1. 11 ಕರಡು ಪರಿನಿಯಮಗಳು (ತ್ರಿಪ್ರತಿಯಲ್ಲಿ)
2. ದಿನಾಂಕ: 19.08.2020 ರ ಹಣಕಾಸು ಸಮಿತಿ ಸಭೆಯ ನಿರ್ಣಯ.
3. ದಿನಾಂಕ:24.08.2020 ರ ವಿದ್ಯಾವಿಷಯಕ ಪರಿಷತ್ತಿನ ನಿರ್ಣಯ.
4. ದಿನಾಂಕ: 30.09.2020 ರ ವಿಶೇಷ ಸಿಂಡಿಕೇಟ್ ಸಭೆಯ ನಿರ್ಣಯ.
5. ದಿನಾಂಕ: 30.11.2020 ರ ಸಿಂಡಿಕೇಟ್ ಸಭೆಯ ನಿರ್ಣಯ.
6. ದಿನಾಂಕ:21.01.2021 ರ ವಿದ್ಯಾವಿಷಯಕ ಪರಿಷತ್ತಿನ ನಿರ್ಣಯ.

ಕರ್ನಾಟಕ ಸರ್ಕಾರ

ಇ-ಕಛೇರಿ ಸಂ: ಇಡಿ 56 ಯುಬಿವಿ 2021

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:23.03.2021

ಇಂದ

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು

ಇವರಿಗೆ

ಕುಲಸಚಿವರು,
ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು.

ಮಾನ್ಯರೇ,

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾಲಯದಿಂದ ಕುಲಾಧಿಪತಿಗಳ ಅನುಮೋದನೆಗಾಗಿ ಸಲ್ಲಿಸಲಾಗಿರುವ ವಿವಿಧ ವಿಷಯಗಳ ಪರಿನಿಯಮಗಳ ಬಗ್ಗೆ

ಉಲ್ಲೇಖ:- ತಮ್ಮ ಪತ್ರಸಂಖ್ಯೆ:ಬೆಂ.ನ.ವಿ/ಕುಸಾ/371/2020-21, ದಿನಾಂಕ:30.01.2021

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000 ಪ್ರಕರಣ 41(5)ರನುಸಾರ ಉಲ್ಲೇಖಿತ ಪತ್ರದನ್ವಯ ಒಟ್ಟಾರೆಯಾಗಿ ಸಲ್ಲಿಸಲಾಗಿರುವ 11 ಪರಿನಿಯಮಗಳನ್ನು ಕುಲಾಧಿಪತಿಗಳ ಅನುಮೋದನೆಗೆ ಸಲ್ಲಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ ಸಂದರ್ಭಾನುಸಾರ ಯುಜಿಸಿ ವಿನಿಯಮಗಳು ಅಥವಾ ಸರ್ಕಾರದ ಕಾರ್ಯನೀತಿಗೆ ಅನುರೂಪವಾಗಿರುವುದನ್ನು ದೃಢಪಡಿಸಿಕೊಂಡು, ಪರಿನಿಯಮವಾರು ಪ್ರತ್ಯೇಕವಾಗಿ, ಪ್ರತಿ ಪುಟದಲ್ಲಿ ಕುಲಪತಿ ಹಾಗೂ ಕುಲಸಚಿವರ ಮೂಲ ಸಹಿ ಇರುವ ಪರಿನಿಯಮಗಳನ್ನು ಕುಲಸಚಿವರ ಮೂಲ ಸಹಿ ಇರುವ ಸಿಂಡಿಕೇಟ್/ವಿದ್ಯಾವಿಷಯಕ ಪ್ರಾಧಿಕಾರಗಳ ನಿರ್ಣಯಗಳ ಉದೃತ ಭಾಗಗಳೊಂದಿಗೆ ತ್ರಿಪ್ರತಿಗಳಲ್ಲಿ ಮರು ಸಲ್ಲಿಸುವಂತೆ ಕೋರಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ

Mahesh

(ಮಹೇಶ ಆರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು-2)

23/03/2021

(2)

ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BENGALURU CITY UNIVERSITY
ಸೆಂಟ್ರಲ್ ಕಾಲೇಜು ಆವರಣ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
Ph.No.080-22961016 / 22131385 E-Mail ID: registrarbcu@gmail.com

ಸಂಖ್ಯೆ: ಬೆಂ.ನ.ವಿ/ಕುಸಅ/ಬೋದಕ/ಪರಿನಿಯಮ/2022–23/743

ದಿನಾಂಕ: 12.08.2022 16

ರವರಿಗೆ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಉನ್ನತ ಶಿಕ್ಷಣ ಇಲಾಖೆ,
ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ,
ಬೆಂಗಳೂರು 560001.

ಮಾನ್ಯರೆ,

ವಿಷಯ:– ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000 ರ ಪ್ರಕರಣ 41(5) ರಡಿ DRAFT-STATUTES RELATING TO APPOINTMENT AND PROMOTION OF TEACHERS AND OTHER ACADEMIC STAFF AND MEASURES FOR THE MAINTENANCE OF STANDARDS IN HIGHER EDUCATION IN THE BENGALURU CITY UNIVERSITY, AS PER THE UGC REGULATIONS 2018" ಕರಡು ಪರಿನಿಯಮಗಳನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ:–
1. ಸರ್ಕಾರಿ ಪತ್ರ ಸಂಖ್ಯೆ: ಇಡಿ 309 ಯುಎನ್ಇ 2021, ದಿನಾಂಕ: 26.07.2022.
2. ದಿನಾಂಕ: 04.08.2022 ರಂದು ಜರುಗಿದ ಹಣಕಾಸು ಸಮಿತಿ ಸಭೆಯ ನಿರ್ಣಯ.
3. ದಿನಾಂಕ: 06.08.2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ.
4. ದಿನಾಂಕ: 06.08.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯ.
5. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 16-08-2022.

ಉಲ್ಲೇಖ (1) ರ ಸರ್ಕಾರದ ಪತ್ರದ ಸೂಚನೆಯ ಮೇರೆಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಬೋಧಕ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದ "STATUTES RELATING TO APPOINTMENT AND PROMOTION OF TEACHERS AND OTHER ACADEMIC STAFF AND MEASURES FOR THE MAINTENANCE OF STANDARDS IN HIGHER EDUCATION IN THE BENGALURU CITY UNIVERSITY, AS PER THE UGC REGULATIONS 2018" ಕರಡು ಪರಿನಿಯಮಗಳನ್ನು ಉಲ್ಲೇಖ (2), (3) ಮತ್ತು (4) ರಲ್ಲಿ ನಮೂದಿಸಿರುವ ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳಾದ ಹಣಕಾಸು ಸಮಿತಿ, ವಿದ್ಯಾವಿಷಯಕ ಪರಿಷತ್ ಮತ್ತು ಸಿಂಡಿಕೇಟ್ ಸಭೆಗಳು ಅನುಮೋದನೆ ನೀಡಿದ್ದು, ಈ ಕರಡು ಪರಿನಿಯಮಗಳನ್ನು ತ್ರಿಪ್ರತಿಯಲ್ಲಿ ಮಾನ್ಯ ಕುಲಾಧಿಪತಿಗಳ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಸದರಿ ಪರಿನಿಯಮಗಳಿಗೆ ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆ ಪಡೆದು ವಿಶ್ವವಿದ್ಯಾನಿಲಯಕ್ಕೆ ತಿಳಿಸಬೇಕೆಂದು ಕೋರಲು ನಿರ್ದೇಶಿತನಾಗಿದ್ದೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
ಕುಲಸಚಿವರು
Registrar
Bengaluru City University
Bengaluru - 560 001

ಅಡಕಗಳು:
1. ಕರಡು ಪರಿನಿಯಮ (ಪ್ರತಿ ಪುಟಕ್ಕೆ ಕುಲಪತಿಗಳು/ಕುಲಸಚಿವರ ಸಹಿಯೊಂದಿಗೆ ತ್ರಿಪ್ರತಿಯಲ್ಲಿ).
2. ದಿನಾಂಕ: 04.08.2022 ರ ಹಣಕಾಸು ಸಮಿತಿ ಸಭೆಯ ನಿರ್ಣಯ.
3. ದಿನಾಂಕ: 06.08.2022 ರ ವಿದ್ಯಾವಿಷಯಕ ಪರಿಷತ್ತಿನ ನಿರ್ಣಯ.
4. ದಿನಾಂಕ: 06.08.2022 ರ ಸಿಂಡಿಕೇಟ್ ಸಭೆಯ ನಿರ್ಣಯ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY
ಸೆಂಟ್ರಲ್ ಕಾಲೇಜು ಆವರಣ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
Ph.No.080-22961016 / 22131385 E-Mail ID: registrarbcu@gmail.com

ಸಂಖ್ಯೆ: ಬೆಂ.ನ.ವಿ/ಕುಸಆ/ಬೋ.ಕೇ.ಪ/2022-23/1456 ದಿನಾಂಕ: 19.08.2022

ರವರಿಗೆ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಉನ್ನತ ಶಿಕ್ಷಣ ಇಲಾಖೆ,
ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ,
ಬೆಂಗಳೂರು 560 001.

ಮಾನ್ಯರೆ,

ವಿಷಯ:- ಕರ್ನಾಟಕರಾಜ್ಯ ವಿಶ್ವವಿದ್ಯಾನಿಲಯಅಧಿನಿಯಮ 2000 ರ ಪ್ರಕರಣ 41(5) ರಡಿ DRAFT-STATUTES GOVERNING CADRE, RECRUITMENT AND PROMOTION OF NON TEACHING, TECHNICAL AND MINISTERIAL STAFF IN THE BENGALURU CITY UNIVERSITY - 2020. ಕರಡು ಪರಿನಿಯಮಗಳನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ:-
1. ಸರ್ಕಾರಿಆದೇಶ ಸಂಖ್ಯೆ: ಇಡಿ 439 ಯುಬಿವಿ 2017 (ಭಾಗ-4) ದಿನಾಂಕ: 07.11.2019.
2. ದಿನಾಂಕ: 30.11.2020 ರಂದು ಜರುಗಿದ 9ನೇಯ ಸಿಂಡಿಕೇಟ್ ಸಭೆಯ ನಿರ್ಣಯ.
3. ದಿನಾಂಕ: 21.01.2021 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ.
4. ತಮ್ಮ ಕಛೇರಿ ಪ.ಸಂ:ಇಡಿ 56 ಯುಬಿವಿ 2021 ದಿನಾಂಕ:23.03.2021
5. ವಿ.ವಿ. ಪತ್ರ ಸಂಖ್ಯೆ: ಬೆಂ.ನ.ವಿ/ಕುಸಆ/100/2021-22, ದಿನಾಂಕ: 06.08.2021
6. ತಮ್ಮ ಕಛೇರಿ ಪ.ಸಂ: ಇಡಿ493ಯುಬಿವಿ 2017 (ಭಾಗ-4) ದಿನಾಂಕ: 01.12.2021.
7. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 19.08.2022.

ಉಲ್ಲೇಖ (1) ರ ಸರ್ಕಾರಿ ಆದೇಶದಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಹೊಸದಾಗಿ ಬೋಧಕೇತರ ಹುದ್ದೆಗಳನ್ನು ಸೃಜಿಸಿ ಮಂಜೂರು ಮಾಡಲಾಗಿದೆ. ಈ ಆದೇಶದಲ್ಲಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳ ಅನುಸಾರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000 ರ ಪ್ರಕರಣ 41 ರ ಉಪಬಂಧಗಳನುಸಾರ ರಚಿಸಿರುವ ಕರಡು ಪರಿನಿಯಮಗಳನ್ನು ಉಲ್ಲೇಖ (4) ಸರ್ಕಾರದ ಪತ್ರದಲ್ಲಿ ಸೂಚಿಸಿರುವಂತೆ ಕ್ರಮವಹಿಸಿ, ಈ ಕರಡು ಪರಿನಿಯಮಗಳಿಗೆ ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆ ಪಡೆದು ವಿಶ್ವವಿದ್ಯಾನಿಲಯಕ್ಕೆ ತಿಳಿಸಬೇಕೆಂದು ಉಲ್ಲೇಖ (5)ರ ಪತ್ರದಲ್ಲಿ ಕೋರಲಾಗಿತ್ತು. ಈ ಮಧ್ಯೆ ಉಲ್ಲೇಖ (6)ರ ಪತ್ರದಲ್ಲಿ ಕೆಲವು ಬೋಧಕೇತರ ಹುದ್ದೆಗಳ ಕಾಲಿಕ ವೇತನ ಶ್ರೇಣಿಯಲ್ಲಿನ ಅಸಂಗತೆಗಳನ್ನು ಸರಿಪಡಿಸಿ ತಿದ್ದುಪಡಿ ಆದೇಶವನ್ನು ಹೊರಡಿಸಲಾಗಿರುತ್ತದೆ.

ಪು.ತಿ.ನೋ.

ಉಲ್ಲೇಖ (6) ರ ಸರ್ಕಾರದ ತಿದ್ದುಪಡಿ ಆದೇಶದ ಪ್ರಕಾರ ವೇತನ ಶ್ರೇಣಿಯಲ್ಲಿನ ಅಸಂಗತೆಗಳನ್ನು ಸರಿಪಡಿಸಿ, ಸಿದ್ಧಪಡಿಸಿರುವ DRAFT -"STATUTES GOVERNING CADRE, RECRUITMENT AND PROMOTION OF NON TEACHING, TECHNICAL AND MINISTERIAL STAFF IN THE BENGALURU CITY UNIVERSITY – **2020"** ರ ಕರಡು ಪರಿನಿಯಮಗಳನ್ನು ತ್ರಿಪ್ರತಿಯಲ್ಲಿ ಮಾನ್ಯ ಕುಲಾಧಿಪತಿಗಳ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಸದರಿ ಪರಿನಿಯಮಗಳಿಗೆ ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆ ಪಡೆದು ವಿಶ್ವವಿದ್ಯಾನಿಲಯಕ್ಕೆ ತಿಳಿಸಬೇಕೆಂದು ಕೋರಲು ನಿರ್ದೇಶಿತನಾಗಿದ್ದೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕಗಳು:

1. ಕರಡು ಪರಿನಿಯಮ (ಪ್ರತಿ ಪುಟಕ್ಕೆ ಕುಲಪತಿಗಳು/ಕುಲಸಚಿವರ ಸಹಿಯೊಂದಿಗೆ ತ್ರಿಪ್ರತಿಯಲ್ಲಿ)
2. ದಿನಾಂಕ: 30.11.2020 ರ ಸಿಂಡಿಕೇಟ್ ಸಭೆಯ ನಿರ್ಣಯ.
3. ದಿನಾಂಕ:21.01.2021ರ ವಿದ್ಯಾವಿಷಯಕ ಪರಿಷತ್ತಿನ ನಿರ್ಣಯ.
4. ವಿ.ವಿ. ಪತ್ರ ಸಂಖ್ಯೆ: ಬೆಂ.ನ.ವಿ/ಕುಸಆ/100/2021-22, ದಿನಾಂಕ: 06.08.2021.
5. ತಮ್ಮ ಪತ್ರ -ಕಛೇರಿ ಸಂ:ಇಡಿ 493 ಯುಬಿವಿ 2017 (ಭಾಗ-4) ದಿನಾಂಕ:01.12.2021.